ಎನ್ನುವ ಋಣಾತ್ಮಕ ನಿಲುವಿನ ಅಗತ್ಯವೂ ಇಲ್ಲ. 'ನಾವಿಬ್ಬರು ಮದುವೆಯಾದರೆ ಜೀವನ ಚೆನ್ನಾಗಿ ಮಾಡಬಲ್ಲೆವೇ? ಹೊಂದಾಣಿಕೆಯು ಸಾಧ್ಯವೇ' ಎನ್ನುವುದನ್ನು ವಿಮರ್ಶಿಸಿಕೊಳ್ಳಲು ಗಂಡುಹೆಣ್ಣು ಲಿವ್ ಇನ್ ಸಂಬಂಧಕ್ಕೆ ಒಳಪಡುತ್ತಾರೆ.

ಹರಿಣಿ ಮತ್ತು ಸಂದೀಪ್ ಶೆಟ್ಟಿ ದಾಂಪತ್ಯವನ್ನು ಪ್ರವೇಶಿಸುವ ಮುನ್ನ ಒಂದಷ್ಟು ದಿನ ಜೊತೆಯಾಗಿದ್ದರು. ಬೆಂಗಳೂರಿನಲ್ಲಿ ವೃತ್ತಿಯಲ್ಲಿದ್ದ ಇಬ್ಬರೂ ಫ್ಲಾಟೊಂದರಲ್ಲಿ ಜೀವನ ಆರಂಭಿಸಿದಾಗಲೇ ಗೊತ್ತಾಗಿದ್ದು, ಹೆಚ್ಚು ಅರ್ಥೈಸಿಕೊಳ್ಳಬೇಕಾಗಿರುವುದು ಒಳಿತನ್ನಲ್ಲ, ಕೆಡುಕನ್ನು ಅಥವಾ ದೌರ್ಬಲ್ಯಗಳನ್ನು ಎನ್ನುವುದು. ಸಂಜೆ ಹೊರಗಿನ ಸುತ್ತಾಟ, ನಿರಂತರ ದುಡಿಮೆಯ ಬಳಿಕ ಪರಸ್ಪರರನ್ನು ಗೌರವಿಸುವ ಬಗೆ, ತೀರಾ ಸುಸ್ತಾದಾಗ ಒಬ್ಬರ ಮೇಲೊಬ್ಬರು ರೇಗುವ ಪ್ರಮಾಣ ಮತ್ತು ಅದರಿಂದ ಉಂಟಾಗುವ ನೋವುಗಳನ್ನು ಸಹಿಸಿಕೊಳ್ಳುವಿಕೆ, ತಾಳ್ಮೆಯು ಪ್ರಮುಖವಾಗುತ್ತದೆ.

'ನಮ್ಮಿಬ್ಬರ ಸಂಬಂಧದಲ್ಲಿ ನಾವು ಪರಸ್ಪರರಿಗೆ ಒಳಿತು ಮಾಡುವ ಉದ್ದೇಶದಿಂದ ನಿರ್ಧಾರಗಳನ್ನು ತೆಗೆದುಕೊಳ್ಳುತ್ತೇವೆಯೇ ಎಂದು ಆಗಾಗ ಪರಿಶೀಲಿಸಿಕೊಳ್ಳುತ್ತೇವೆ. ವೃತ್ತಿಯಲ್ಲಾಗಲೀ, ವೈಯಕ್ತಿಕ ಬದುಕಿನಲ್ಲಾಗಲೀ ನಾನು ತೆಗೆದುಕೊಳ್ಳುವ ನಿರ್ಧಾರದಿಂದ ಅವನಿಗೆ ಕೆಡುಕಾಗುವುದಿಲ್ಲವಷ್ಟೇ ಎಂದು ಆಗಾಗ ನಾನು ಪ್ರಶ್ನಿಸಿಕೊಳ್ಳುತ್ತೇನೆ. ಅವನೂ ಇದೇ ರೀತಿ ಯೋಚಿಸುತ್ತಾನೆ. ಆದರೆ ಅವನಿಗೆ ಚೆನ್ನಾಗಿ ಬುದ್ಧಿ ಕಲಿಸಬೇಕು ಎಂಬ ಉದ್ದೇಶವನ್ನು ಮನಸ್ಸಿನಲ್ಲಿಟ್ಟುಕೊಂಡು ಯಾವಾಗ ನಿರ್ಧಾರ ತೆಗೆದುಕೊಳ್ಳಲು ಆರಂಭಿಸುತ್ತೇವೋ, ಅಂದಿಗೆ ನಮ್ಮ ನಡುವಿನ ಸಹಬಾಳ್ವೆಯ ಬಂಧ ಕಡಿದುಹೋಗಿದೆ ಎಂದೇ ಅರ್ಥ' ಎಂದು ಹರಿಣಿ ಹೇಳುತ್ತಾರೆ. ಇಪ್ಪತ್ತೇಳು ವರ್ಷ ವಯಸ್ಸಿನ ಹರಿಣಿ ಸಾಫ್ಟ್‌ವೇರ್ ಕಂಪೆನಿಯೊಂದರಲ್ಲಿ ಎಚ್.ಆರ್. ಆಗಿ ಕೆಲಸ ಮಾಡುತ್ತಿದ್ದಾರೆ. 'ಈ ಸಹಬಾಳ್ವೆಯಲ್ಲಿ ಸಾಕಷ್ಟು ಮಿತಿಗಳಿವೆ. ಉದಾಹರಣೆಗೆ, ನಮ್ಮಿಬ್ಬರಲ್ಲಿ ಒಬ್ಬರಿಗೆ ಅನಾರೋಗ್ಯ ಕಾಡಿದರೆ ಆಸ್ಪತ್ರೆಯಲ್ಲಿ ನಿರ್ಧಾರ ತೆಗೆದುಕೊಳ್ಳುವ ಸಂದರ್ಭದಲ್ಲಿ ಸಹಿ ಹಾಕುವ ಅವಕಾಶ ನನಗೆ ಅಥವಾ ಅವನಿಗೆ ಇರುವುದಿಲ್ಲ. ಆದ್ದರಿಂದ ಈ ಸಂಬಂಧವು ಅಂತಿಮವಾಗಿ ರಕ್ತಸಂಬಂಧಗಳನ್ನು ಅವಲಂಬಿಸಿಯೇ ಮುಂದುವರೆಯುತ್ತದೆ. ಮುಖ್ಯವಾಗಿ ಇಬ್ಬರೂ ಏಕಾಂಗಿಯಾಗಿ ಬದುಕನ್ನು ನಿಭಾಯಿಸುವಷ್ಟು ಸಮರ್ಥರಿದ್ದಾಗ ಮಾತ್ರ ಇವುಗಳನ್ನೆಲ್ಲ ಅರ್ಥಮಾಡಿಕೊಂಡು ನಿರ್ವಹಿಸಬಹುದು' ಎನ್ನುತ್ತಾರೆ ಹರಿಣಿ.

ಸಂದೀಪ್ ಹೇಳುವ ಮಾತುಗಳು ಇಲ್ಲಿ ಗಮನಾರ್ಹ. ''ನಾನು ದುಡುಕಿದರೆ, ಉಡಾಫೆಯಾಗಿ ವರ್ತಿಸಿದರೆ ಮರುದಿನ ಎಲ್ಲಿ ಅವಳು ನನ್ನ ಬಿಟ್ಟು ಹೋಗೇಬಿಡುತ್ತಾಳೋ ಎಂಬ ಅಳುಕೇ ನನ್ನನ್ನು ಎಚ್ಚರದಲ್ಲಿ ಇರಿಸುತ್ತದೆ. ಲಿವ್ ಇನ್ ರಿಲೇಷನ್‌ನಲ್ಲಿರುವ ಒಳ್ಳೆಯ ಅಂಶವೇ ಇದು. ಬಹುಶಃ ಅವಳಿಗೂ ಈ ಅಸುರಕ್ಷತೆಯ ಭಾವ



'

ಲಿವ್ ಇನ್ ರಿಲೇಷನ್ ಅಥವಾ ಸಹಬಾಳ್ವೆಯು ಪ್ರಬುದ್ಧ ವ್ಯಕ್ತಿಗಳಿಬ್ಬರ ನಡುವೆ ಮಾತ್ರ ಸಾಧ್ಯ. ಇಬ್ಬರ ಉದ್ದೇಶವೂ ಸುಂದರವಾದ ಜೀವನವನ್ನು ಕಟ್ಟಿಕೊಳ್ಳುವುದಾಗಿರಬೇಕೇ ಹೊರತು ಅಪ್ರಾಮಾಣಿಕತೆ ಇದ್ದಲ್ಲಿ ಇದು ಯಶಸ್ವಿಯಾಗುವುದಿಲ್ಲ. ಇದರಲ್ಲಿ ಪೋಷಕರ ಪಾತ್ರವೇನೂ ಇರುವುದಿಲ್ಲ. ವರದಕ್ಷಿಣೆಯ ಸಮಸ್ಯೆಯೂ ಇಲ್ಲಿ ಎದುರಾಗುವುದಿಲ್ಲ.

**-ರತಿ ಇ.ಆರ್.**
**ಅಖಿಲ ಭಾರತ ಪ್ರಗತಿಪರ ಮಹಿಳಾ ಸಂಘಟನೆಯ ರಾಷ್ಟ್ರೀಯ ಅಧ್ಯಕ್ಷೆ,** ಮೈಸೂರು

